
# ವೈವಿಧ್ಯ–ಸಮೃದ್ಧಿ–ಸಂಭ್ರಮ

ಸಮಾಜದ ಮೇಲೆ ಚಿಂತಕರು ಯಾವೆಲ್ಲ ರೀತಿಯಲ್ಲಿ ಪ್ರಭಾವ ಬೀರುತ್ತಾರೆ ಎನ್ನುವುದನ್ನು ಊಹಿಸುವುದು ಕಷ್ಟ. ಅವರ ಜೀವಪರ ಚಿಂತನೆಗಳಿಗೆ ಲೋಕದಲ್ಲಿ ಎಲ್ಲೆಗಳು ಇರುವುದಿಲ್ಲ. ಮಹಾತ್ಮ ಗಾಂಧೀಜಿಯ ಪ್ರೇರಣೆ, ಪ್ರಭಾವಗಳು ಕೂಡ ಹಾಗೆಯೇ. ಅವರ ಚಿಂತನೆಗಳು ಹರಿಯುವ ನದಿ ನೀರಿನ ತರಹ. ನದಿಯಿಂದ ಯಾರು ಬೇಕಾದರೂ ನೀರನ್ನು ಎತ್ತಿಕೊಂಡು, ಬೇಕಾದ ರೀತಿಯಲ್ಲಿ ಬಳಸಿಕೊಳ್ಳಬಹುದು. ಅದು ಜೀವಜಲವಾಗಿ ನಮ್ಮನ್ನು ಉಳಿಸುತ್ತದೆ. ಸಾಹಿತ್ಯ, ರಾಜಕಾರಣ, ಶಿಕ್ಷಣ, ಕಲೆ, ಸಿನಿಮಾ, ಹೋರಾಟ, ಪರಿಸರ ಹೀಗೆ ಹಲವು ರಂಗಗಳಲ್ಲಿನ ಅವರ ಪ್ರಭಾವ ಅಸಾಧಾರಣ ಮತ್ತು ಅಪರಿಮಿತವಾದದ್ದು. ಪರಿಸರವನ್ನು ಉಳಿಸಿಕೊಳ್ಳುವ ಕಾಳಜಿಗಳ ಹಿಂದೆಯೂ ಗಾಂಧೀಜಿಯ ತತ್ವ, ಚಿಂತನೆಗಳ ಪ್ರೇರಣೆಯಿದೆ. ಭೂಮಿ–ಪರಿಸರವನ್ನು ರಕ್ಷಿಸುವ ಪ್ರಯತ್ನಗಳಿಗೆ ಮಾರ್ಗದರ್ಶಿಯಾಗಿರುವ, ಎಲ್ಲ ಕಾಲಗಳಿಗೂ ಕ್ಷೇತ್ರಗಳಿಗೂ ಸಲ್ಲುವ 'ಗಾಂಧಿ ಮಾರ್ಗ'ದ ಗುಣ ನಮ್ಮನ್ನು ಸೆಳೆಯದೇ ಇರದು. ಅತ್ಯುತ್ತಮ ಚಿಂತನೆಗಳು ನಿಂತಲ್ಲಿ ನಿಲ್ಲದೇ ಚಲನಶೀಲವಾಗಿರುತ್ತವೆ ಎಂಬುದನ್ನು ಇದು ತೋರುತ್ತದೆ. ಪರಿಸರ ರಕ್ಷಣೆಯ ಹೋರಾಟಗಳಿಗೆ, ಅದರ ಕುರಿತ ನಮ್ಮ ಎಚ್ಚರಕ್ಕೆ ಗಾಂಧೀಜಿ ಚಿಂತನೆಗಳು ಕೊಟ್ಟ ಸ್ಫೂರ್ತಿಯನ್ನು, ಅದರ ಹಿನ್ನೆಲೆಯನ್ನು ಈ ಸಂಚಿಕೆಯಲ್ಲಿರುವ ನಾಗೇಶ ಹೆಗಡೆ ಅವರ ನುಡಿನಾಟಕ 'ಗಾಂಧೀಜಿ ರೀಚಾರ್ಜ್' ಉತ್ತಮವಾಗಿ ಪ್ರಸ್ತುತಪಡಿಸಿದೆ. ಗಾಂಧಿ ಚಿಂತನೆಗಳ ಈ ನಾಟಕವನ್ನು ವಿದ್ಯಾರ್ಥಿಗಳು, ಶಿಕ್ಷಕರು ನಾಟಕೀಯವಾಗಿ ಧ್ವನಿಮುದ್ರಿಸಿ ಹಂಚಿಕೊಳ್ಳಬಹುದು, ವಿದ್ಯಾರ್ಥಿಗಳಿಗೆ ಕೇಳಿಸಬಹುದು. ಮುಂದಿನ ತಲೆಮಾರಿಗೆ ಗಾಂಧೀಜಿಯನ್ನು ತಲುಪಿಸುವ ಭಾವ ತೀವ್ರತೆಯ ಈ ಪುಟ್ಟ ಕೃತಿ, ಚುರುಕಾದ ಮಾತುಗಳ ಮೂಲಕ ಗಾಂಧೀಜಿ ಚಿಂತನೆಯನ್ನು ಚಿತ್ರಿಸುತ್ತದೆ.



ಜಾನಪದ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡಿರುವ ವಿದ್ವಾಂಸ ವೀರಣ್ಣ ದಂಡೆ ಅವರ ಸಂದರ್ಶನ ಈ ಸಂಚಿಕೆಯ ಮತ್ತೊಂದು ವಿಶೇಷ. ಕಲಬುರ್ಗಿಯವರಾದ ವೀರಣ್ಣ – ಜನಪದ ಕಥನಗಳು, ಹಾಡುಗಳಲ್ಲಿ ಸಾಕಷ್ಟು ಕೆಲಸ ಮಾಡಿದವರು. ಅವರು ಜಾನಪದದಲ್ಲಿ ಮಾಡಿರುವ ಸಂಶೋಧನೆಗಳು, ಸಂಗ್ರಹಗಳು ಈಗಾಗಲೇ ಸಾಹಿತ್ಯ ವಿದ್ಯಾರ್ಥಿಗಳ, ವಿದ್ವಾಂಸರ ಗಮನವನ್ನು ಸೆಳೆದಿವೆ. ಸಂದರ್ಶನದಲ್ಲಿ ವೀರಣ್ಣ ಅವರು ಹಂಚಿಕೊಂಡ ವಿಚಾರಗಳು ಓದುಗರಿಗೆ ಜಾನಪದ ಅಧ್ಯಯನದ ಸ್ಥೂಲ ಸ್ವರೂಪವನ್ನು ಕಾಣಿಸಬಲ್ಲವು.

ಎಂದಿನಂತೆ ಈ ಸಂಚಿಕೆಯಲ್ಲೂ ವೈವಿಧ್ಯಮಯ ಕತೆಗಳು, ಪ್ರಬಂಧಗಳಿವೆ; ಪುಸ್ತಕ ವಿಮರ್ಶೆಯಿದೆ. ಕನ್ನಡ ಸಾಹಿತ್ಯದ ವೈವಿಧ್ಯ ಮತ್ತು ಸಮೃದ್ಧಿಯನ್ನು ಸೂಚಿಸುವಂತಿರುವ ಈ ರಚನೆಗಳು ಓದಿನ ಖುಷಿಯನ್ನು ಹೆಚ್ಚಿಸುವುದರ ಜೊತೆಗೆ, ಚಿಂತನ–ಮಂಥನಕ್ಕೂ ಗ್ರಾಸ ಒದಗಿಸುತ್ತವೆ ಎನ್ನುವ ನಂಬಿಕೆ ನಮ್ಮದು.

**-ಮಯೂರ ಬಳಗ**